ಸಾಕ್ಷಿಯು ಕ್ರಮವಾಗಿ ಪ್ರಮಾಣಿಕರಿಸಿದ ದಿನಾಂಕಃ **26-09-2024**

ಪಾಟಿ ಸವಾಲುಃ ಶ್ರೀ. ಡಿ.ಕೆ.ಟಿ ವಕೀಲರಿಂದ **2** ರಿಂದ **5** ನೇ ಪ್ರತಿವಾದಿ ಪರ-

ಸರ್ವೆ ಕಾರ್ಯವನ್ನು ಚೈನು ಹಿಡಿದು ಅಳದಿರುತ್ತಾರೆ. ಆ ಸ್ಥಳದಲ್ಲಿ ಟೇಬಲ್ ಮೂಲಕ ಸರ್ವೆ ಕಾರ್ಯ ಮಾಡಿರುತ್ತಾರೆ. ಪಿಟಿ ಶೀಟ್ ಅನ್ನು ಅವರು ಕೊಟ್ಟಿಲ್ಲ ಆದ್ದರಿಂದ ಹಾಜರುಪಡಿಸಿಲ್ಲ. ಟೇಬಲ್ ಸರ್ವೆ ಮಾಡದೇ ಇರುವುದರಿಂದ ಪಿಟಿ ಶೀಟ್ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸ್ಥಳದಲ್ಲಿ ಏನೂ ಬರವಣಿಗೆ ಮಾಡಿಲ್ಲ ಎಂದರೆ ಸರಿಯಲ್ಲ. ಸ್ಥಳದಲ್ಲಿ ಯಾರ ಸಹಿ ಪಡೆದಿಲ್ಲ ಎಂದರೆ ಸರಿಯಲ್ಲ. ಸರ್ವೆ ಕಾರ್ಯ ಮಾಡಿದ ನಂತರ ಸಹಿ ಪಡೆದಿರುತ್ತಾರೆ. ಸ್ಥಳದಲ್ಲೇ ಸಹಿ ಮಾಡಿರುತ್ತೇನೆ. **12** ರಿಂದ **1** ಗಂಟೆ ಸಮಯದಲ್ಲಿ ಸಹಿ ಮಾಡಿರುತ್ತೇನೆ. ಅಳತೆ ಕಾರ್ಯದಲ್ಲಿ **1** ನೇ ಪ್ರತಿವಾದಿಯ ಕುಟುಂಬದವರು, ಸುತ್ತ ಇರುವ ಜನರು, ನೋಟಿಸು ಕೊಟ್ಟಿದ್ದ ಜನರು ಹಾಜರಿದ್ದರು. ಅವರುಗಳಿಂದ ಸಹಿ ಪಡೆದ ಬಗ್ಗೆ ನನಗೆ ಗೊತ್ತಿಲ್ಲ.

**2** ರಿಂದ **5** ನೇ ಪ್ರತಿವಾದಿಗಳ ಹಂಚಿನ ಮನೆಯ ಸುತ್ತ ಮುತ್ತ **58** ಸೆಂಟ್ ಜಾಗದಲ್ಲಿ ಕಾಫಿ ಮತ್ತು ಸಿಲ್ವರ್ ಮರಗಳು ಇವೆ ಎಂದರೆ ಸರಿ. ಅಲ್ಲಿ ಮರವನ್ನು ಆಗಾಗ ಕತ್ತರಿಸುತ್ತಾರೆ ಎಂದರೆ ಸರಿಯಲ್ಲ. ಹಂಚಿನ ಮನೆಯ ಮೊದಲು ಹುಲ್ಲು ಮನೆ ಇತ್ತು ಎಂದರೆ ಸರಿ. ಆ ಹುಲ್ಲು ಮನೆ ಇರುವ ಜಾಗದಲ್ಲೇ ಹಂಚಿನ ಮನೆ

ಮಾಡಿರುತ್ತಾರೆ ಎಂದರೆ ಸರಿ. ಲಿಂಗಪ್ಪ ಪೂಜಾರಿ ಇರುವ ಕಾಲದಲ್ಲಿ **50** ವರ್ಷಗಳಿಂದ ಹುಲ್ಲು ಮನೆ ಇದೆ ಎಂದರೆ ಸರಿ. ನನ್ನ ತಂದೆ **1948** ರಲ್ಲಿ ಜಾಗ ಮಾರಿದ್ದಾರೆ ಎಂದರೆ ಸರಿಯಲ್ಲ ಆ ಜಾಗವನ್ನು ನನ್ನ ತಂದೆ ಮಾರಾಟ ಮಾಡಿಲ್ಲ. ಸರ್ವೆ ನಂ.**126** ರ ಆಸ್ತಿಯನ್ನು ಮಾತ್ರ ಮಾರಾಟ ಮಾಡಿರುತ್ತಾರೆ. ಸರ್ವೆ ನಂ.**126** ರಲ್ಲಿ **50** ಸೆಂಟ್ ಮಾರಾಟ ಮಾಡಿರುತ್ತಾರೆ.

ಮಾರಿದ ಜಾಗವನ್ನು ಸೇರಿಸಿಕೊಂಡು ಮುತ್ತಮ್ಮ ಎಂಬುವವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಮಾರಿರಬಹುದು ನನಗೆ ಗೊತ್ತಿಲ್ಲ. ಆ ಬಗ್ಗೆ ಇತ್ತೀಚೆಗೆ ತಿಳಿದುಕೊಂಡಿರುತ್ತೇನೆ. ಆ ಜಾಗದ ಸ್ವಾದೀನ ಈಗಲೂ ನಮ್ಮ ಬಳಿ ಇದೆ ಎಂದರೆ ಸರಿಯಲ್ಲ. ಒಟ್ಟು **50** ಸೆಂಟ್ ಜಾಗವನ್ನು ಮಾರಿದ ಜಾಗವೇ ಒತ್ತುವರಿ ಜಾಗ ಎಂದರೆ ಸರಿಯಲ್ಲ. ಸರ್ವೆ ನಂಬರ್ ಗಳು ತಪ್ಪಾಗಿದೆ ಎಂದು ಗೊತ್ತಾದ ನಂತರ ಪುನಃ ಅದೇ ಜಾಗವನ್ನು ಮುತ್ತಮ್ಮ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅದೇ ಜಾಗವನ್ನು ಕ್ರಯ ಪತ್ರದವರಿಗೆ ಖಾತೆಯಾಗದ ಕಾರಣ ಮುತ್ತಮ್ಮ ರವರಿಗೆ ಮಾರಾಟ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಪುನಃ ಪುತ್ತಮ್ಮ ರವರಿಗೆ ಗಲಾಟೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಆ ಕಾರಣದಿಂದ ಅವರು ದಾವೆ ಹಾಕಿ ನನ್ನ ಮತ್ತು ನನ್ನ ಸಹೋದರರ ವಿರುದ್ದ ತಮ್ಮ ಆಸ್ತಿಗೆ ಅಡಚನೆ ಮಾಡುತ್ತಿದ್ದೇವೆ ಎಂದು ದಾವೆ ಹೂಡಿ ಡಿಕ್ರಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಆ ರೀತಿ ಡಿಕ್ರಿ ಆಗಿದ್ದರೂ ಸಹ ಆಸ್ತಿ ಬಿಟ್ಟು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಮಾರಾಟ

ಮಾಡುವಾಗ ಸರ್ವೆ ನಂಬರ್ ಅನ್ನು ತಪ್ಪಾಗಿ ನಮೂದು ಮಾಡಿರುತ್ತೇವೆ ಎಂದರೆ ಸರಿಯಲ್ಲ. ಆದ್ದರಿಂದ ಸರ್ವೆ ನಂ.**148** ರ ಜಾಗ ಮೊದಲು ಮಾರಿದ್ದೇವೆ ಎಂದರೆ ಸರಿಯಲ್ಲ. ಸರ್ವೆ ನಂ. **148** ರ ಬದಲಿಗೆ **126** ಎಂದು ನಿಂಗಪ್ಪ ಪೂಜಾರಿಗೆ ಮಾರಾಟ ಮಾಡಿರುತ್ತೇವೆ ಎಂದರೆ ಸರಿಯಲ್ಲ.

**1948** ರಿಂದ ಪ್ರತಿವಾದಿಗಳು ಇರುವ ಆಸ್ತಿ ಅವರ ಸ್ವಾದೀನ ಇದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.**148/1** ರಲ್ಲಿ ನನ್ನ ವಾಸದ ಮನೆ ಇರುತ್ತದೆ. ಈರಮ್ಮ ರವರಿಗೆ ಮಾರಾಟ ಮಾಡಿದ ಸರ್ವೆ ನಂ.**148** ನಂತರ ಪೋಡ್ ಆಗಿ **148/1** ಎಂದು ಆಗಿದೆ ಎಂದರೆ ಸರಿಯಲ್ಲ. ಮೂಲ ಸರ್ವೆ ನಂ.**148** ಎಂದು ಇತ್ತು ಎಂದರೆ ಸರಿ. ಸರ್ವೆ ನಂ.**148** ಎಂದು ತಿದ್ದುಪಡಿ ಕ್ರಯ ಪತ್ರ ಬರೆದು ಕೊಡುವ ಜವಾಬ್ದಾರಿ ನನಗೆ ಇದೆ ಎಂದರೆ ಸರಿಯಲ್ಲ. ಮನೆ ಮತ್ತು ಸುತ್ತ ಮುತ್ತ ಇರುವ **50** ಸೆಂಟ್ ಜಾಗ ಒಟ್ಟುವರಿ ಮಾಡಿದ ಜಾಗ ಅಲ್ಲ ಅದನ್ನು ನನ್ನ ತಂದೆ ಲಿಂಗಪ್ಪ ಪೂಜಾರಿಗೆ ಮಾರಾಟ ಮಾಡಿದ ಜಾಗ ಎಂದರೆ ಸರಿಯಲ್ಲ. **2** ರಿಂದ **5** ನೇ ಪ್ರತಿವಾದಿಗಳು ಇರುವ ಮನೆ ಮತ್ತು ಅದರ ಸುತ್ತ ಮುತ್ತ ಇರುವ ಜಾಗದ ಮೌಲ್ಯ **15** ಲಕ್ಷ ಮನೆ ಬೆಲೆ **20** ಲಕ್ಷ ಇದೆ ಎಂದರೆ ನನಗೆ ಗೊತ್ತಿಲ್ಲ. ಆ ವಿಷಯ ನನಗೆ ಗೊತ್ತಿದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾದಲ್ಲಿ ಹೇಳಿದಂತೆ ದಿಃ**03-02-2020** ರಂದು ಸರ್ವೆ ಮಾಡಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂಬರ್ ತಪ್ಪಿಸಿ ಮಾರಾಟ ಮಾಡಿಕೊಂಡು ನಿಜವಾದ ಸರ್ವೆ ನಂಬರ್ ಅನ್ನು ನನ್ನ ಬಳಿ

ಇಟ್ಟುಕೊಂಡು ದುರ್ಲಾಭ ಪಡೆಯಲು ಸುಳ್ಳ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಪಾಟಿ ಸವಾಲು ಮುಕ್ತಾಯವಾಯಿತು.

ಮರು ವಿಚಾರಣೆ ಇಲ್ಲ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು** ಮಾಡ**ಲಾಗಿದೆ).**

Sd/-
**ಓ ಹೇ ಕೇ ಸರಿ ಇದೆ**

**ಪ್ರ ದ ನ್ಯಾ ದಂ ಸೋ ಪೇಟೆ**